ಮಾಡಿದಾಗಲೆಲ್ಲ, 'ನೀವೆಂತದು ಸುರೇಶಣ್ಣ ಮಕ್ಕಳ ಹಾಗೆ ಮಾಡ್ತೀರಿ. ಹೇಗಿದ್ರೂ ರಾಜನನ್ನು ಬೆಳಗ್ಗೆ ನಾನೇ ಕೊಂಡು ಹೋಗುವುದಲ್ವ. ಎಲ್ಲಿದ್ರೆಂತಂತೆ. ಈಗ ನಿಮ್ಗೇನಾದ್ರೂ ತೊಂದ್ರೆ ಆಗಿದಾ? ಅವನ ದುಡಿಮೆ ಜಾಸ್ತಿಯಾದ್ರೆ ನಿಮ್ಗೇ ಲಾಭವಲ್ವಾ? ರಾತ್ರಿಯ ಬಾಡಿಗೆಯಲ್ಲಿ ಲಾಭ ಜಾಸ್ತಿ' ಅನ್ನುತ್ತಿದ್ದ. ಅವನ ಮಾತು ನಿಜವೇ. ಇತ್ತೀಚೆಗೆ ಕೈಗೆ ಸಿಗುವ ನೋಟುಗಳ ಸಂಖ್ಯೆ ಖುಷಿ ಕೊಡುತ್ತಿತ್ತು. ಆದರೆ, ಈ ವಿಚಾರ ತಿಳಿದಾಗ ಫಕೀರಿಚ್ಚ ಮಾತ್ರ, 'ರಾತ್ರಿ ಬಾಡಿಗೆಗೂ ಒಂದು ಕ್ರಮ ಉಂಟು ಸುರೇಶ. ಮುಷ್ಟಿಯಲ್ಲಿ ಬಾಚಿ ದುಡ್ಡು ಕೊಡುವ ರಾತ್ರಿ ಬಾಡಿಗೆಯವರು ಅಂದ್ರೆ ಅದು ಸೈತಾನಿಗಳ ಬೇಡಂಗಟ್ಟೆ ವಯಿವಾಟುಗಳದ್ದೇ ಆಗಿರ್ತದೆ. ಅಪಾಯ ನಿನ್ನ ಬೆನ್ನಿಗೇ ಇರ್ತದೆ' ಅಂದಿದ್ದ.

'ಅವರ ಕೆಲಸ ಎಂತದ್ದಾದ್ರೆ ನಂಗೇನಂತೆ ಫಕೀರಿಚ್ಚ? ನನ್ನ ರಿಕ್ಷಾ ಹೋಗದಿದ್ರೆ ಬೇರೆ ಬಾಡಿಗೆ ಹಿಡೀತಾರಲ್ಲದೆ ಅವರೇನು ವಯಿವಾಟು ನಿಲ್ಲಿಸುವುದಿಲ್ಲಲ್ಲ. ಹಗಲಿನಲ್ಲಿ ಬಾಡಿಗೆಗೆ ಬರುವವರೆಲ್ಲ ಎಂತೆಂತದಕ್ಕೆ ಬರುವವರು ಅಂತ ಯಾರಿಗಾದ್ರೂ ಗೊತ್ತಿರ್ತದಾ? ರಿಕ್ಷಾ ಇಟ್ಟದ್ದೇ ಬಾಡಿಗೆಗೆ ಹೋಗ್ಲಿಕ್ಕಲ್ವಾ. ಅಷ್ಟಕ್ಕು ಮೂಸಾ ಭಯಂಕರ ಹುಷಾರಿ ಜನ ನಿಮ್ಗೆ ಗೊತ್ತುಂಟಲ್ಲ' ಅಂದುಬಿಟ್ಟಿದ್ದ. ಮೂಸಾನ ಈ ಬುದ್ಧಿವಂತಿಕೆಯಿಂದಾಗಿಯೇ ತನ್ನ ಸಂಪಾದನೆ ಕಡಿಮೆ ಅವಧಿಯಲ್ಲೇ ನಿರೀಕ್ಷೆಗಿಂತ ಜಾಸ್ತಿಯಾಗಿದ್ದು ಅನಿಸಿತು ಸುರೇಶನಿಗೆ. ಪಾರ್ಟಿ ಬಾಡಿಗೆಗೆ ಸಿಕ್ಕಿದರೆ ಅವನಿಗೆ ಬೇರೆಂತ ನೆನಪಾಗ್ಲಿಕ್ಕಿಲ್ಲ. ಎಂತದಕ್ಕು ಇನ್ನೊಮ್ಮೆ ಫೋನ್ ಮಾಡಿ ನೋಡುವಾ ಅಂದುಕೊಂಡು ಮೊಬೈಲ್ ತೆಗೆದ. ಅಷ್ಟರಲ್ಲಿ ಗೇಟಿನೆದುರು ರಿಕ್ಷಾ ಹಾರ್ನ್. ರಾಜನೇ ಬಂದುಬಿಟ್ಟನೆಂದುಕೊಂಡರೆ ಇನ್ಯಾವುದೋ. ಡ್ರೈವರ್ ಅಲ್ಲಿಂದಲೇ ಹೊರಗಿಣುಕಿ "ಮೂಸಾಕುಞಿ ಕಳಿಸಿದ್ದು. ಅವರ ರಿಕ್ಷಾ ಅಡ್ಕತ್ತಬೈಲಿನಲ್ಲಿ ಪಂಚರ್ ಆಗಿದೆಯಂತೆ. ಪಂಚರ್ ಹಾಕಿಸಿಯಾಗುವಾಗ ಸಿನಿಮಾಕ್ಕೆ ಲೇಟಾಗ್ಬಹುದಂತ ನನ್ನ ಹತ್ತಿರ ಹೋಗು ಅಂದಿದ್ದಾರೆ" ಅಂದ.

ಹಾರ್ನ್ ಸದ್ದು ಕಿವಿಗೆ ಬೀಳುತ್ತಿದ್ದಂತೆ ಮಕ್ಕಳು "ಅಮ್ಮಾ, ಬೇಗ ಬಾ. ರಿಕ್ಷಾ ಬಂತು" ಅನ್ನುತ್ತ ಓಡಿಯಾಗಿತ್ತು. ಅವರೆಲ್ಲ, ಕೆಲವೇ ಕ್ಷಣದಲ್ಲಿ ಸುರುವಾಗಿಬಿಡುವ ಸಿನೆಮಾ ನೆನೆಯುತ್ತ ಗಡಿಬಿಡಿಯಲ್ಲಿ ರಿಕ್ಷಾ ಹತ್ತಿದರೂ ಸುರೇಶ "ರಾಜನಾಗಿದ್ದರೆ ನಾನೇ ಬಿಟ್ಟುಕೊಂಡು ಹೋಗಬಹುದಿತ್ತು. ಆ ಗಮ್ಮತ್ತೇ ಬೇರೆಯಾಗಿತ್ತು" ಅನ್ನುವ ಸಣ್ಣ ಕರಕರೆಯಲ್ಲೆ ರಿಕ್ಷಾ ಹತ್ತಿದ.

ಈ ಘಟನೆಯ ನಂತರವೂ ಎಲ್ಲವೂ ಮೊದಲಿನಂತೆಯೇ. ಹೈಸ್ಕೂಲು ಮುಗಿಸಿದ ಮಗಳು ಪಿ.ಯು.ಸಿ.ಗೆ ಮಂಗಳೂರಿನ ಕಾಲೇಜಿಗೂ; ಏಳನೆ ತರಗತಿ ಮುಗಿಸಿದ ಮಗ ಕಾಸರಗೋಡಿನ ಹೈಸ್ಕೂಲಿಗೂ ಸೇರಿದ್ದರಿಂದ ಖರ್ಚು ಜಾಸ್ತಿಯಾಗಿತ್ತು. ರಾತ್ರಿ ರಾಜ ಬರದಿದ್ದರೆ ಮರುದಿನವಿಡೀ ಏನೋ ಕಳೆದುಕೊಂಡವನಂತಿರುವುದು; ಮೂಸಾಕುಞಿಯ ವ್ಯಾವಹಾರಿಕ ಉಪದೇಶದಿಂದ ಮತ್ತೆ ಸಮಾಧಾನಪಟ್ಟುಕೊಳ್ಳುವುದು ಮಾಮೂಲಾಗಿತ್ತು. ಖರ್ಚುಗಳ ನಡುವೆಯೂ ಕೈಯಲ್ಲೊಂದಿಷ್ಟು ಕಾಸು ತಿರುಗುವುದರಿಂದ ಸುರೇಶ ಕಾರಣೀಕದ ಭಗವತೀಸ್ಥಾನದ ಧಾರ್ಮಿಕ ಕಾರ್ಯಗಳಲ್ಲಿ ಮುಂದಾಳುವಾಗಲಾರಂಭಿಸಿದ್ದ. ಅವನ ಹೆಂಡತಿ ಸ್ತ್ರೀ ಶಕ್ತಿ ಸಂಘಟನೆಯ ಸಕ್ರಿಯ ಸದಸ್ಯೆಯಾಗಿ ಓಡಾಡಲಾರಂಭಿಸಿದ್ದಲ್ಲದೆ, ಬರುವ ಪಂಚಾಯ್ತಿ ಎಲೆಕ್ಷನ್ನಿಗೆ ಮಹಿಳಾ ವಾರ್ಡಿನಲ್ಲಿ ಓಟಿಗೆ ನಿಂತು ಮೆಂಬರ್ ಆಗುವ ತಯಾರಿಯಲ್ಲಿದ್ದಳು. ಸುರೇಶನ ಓಡಾಟಕ್ಕೊಂದು ಸ್ಕೂಟರ್ ಬಂದಿತ್ತು. ಫಕೀರಿಚ್ಚನೇ ಗುರುತಿನವರಿಂದ ಕಡಿಮೆ ರೇಟಿಗೆ ಕೊಡಿಸಿದ್ದು. ಸ್ಕೂಟರಿನಿಂದಾಗಿ ಸುರೇಶನಿಗೆ ಪ್ರತಿಸಂಜೆ ಬಡ್ಡಿ ವಸೂಲಿಯ ತಿರುಗಾಟಕ್ಕೆ ಅನುಕೂಲವಾಗಿತ್ತು. ಈಗ ಮಗಳ ಬೇಕುಗಳೂ ಜಾಸ್ತಿಯಾಗಿದ್ದವು. ದಿನವೂ ಬಸ್ಸಿನಲ್ಲಿ